

# ಕಣದ ಒಡೆಯ ಗುಂಡುಕಲ್ಲು

ಬೆಳೆದು ನಿಂತ ರಾಗಿ ಬೆಳೆಯ ಕಟಾವು ಮಾಡುವುದು, ಹೊಲದಲ್ಲಿಯೇ ಒಣಗಿಸುವುದು, ನಂತರ ಕಟ್ಟುಗಳನ್ನು ಕಟ್ಟಿ ಹೊಲ–ಕಣದಲ್ಲಿ ಜೋಡಿಸುವುದು ರೈತರ ಕಸುಬಾಗಿತ್ತು. ಭೂಮಿಯ ತಳದಿಂದ ಗೆದ್ದಲು ಹತ್ತದಂತೆ, ಕಲ್ಲು–ಮರಗಳ ಮಂಚಿಕೆ ತಯಾರಿಸಿ ಅದರ ಮೇಲೆ ರಾಗಿ ಇಡಲಾಗುತ್ತಿತ್ತು. ಹಾಗೆಯೇ ಮಳೆ ಬಂದರೂ ತೆನೆಗಳು ತೋಯದ ಹಾಗೆ ಬಣವೆಯ ಒಳಗೆ ಒಪ್ಪವಾಗಿ ಜೋಡಿಸುವುದು ಒಂದು ರೀತಿಯ ಕಲೆಯೇ ಆಗಿತ್ತು. ಇದೆಲ್ಲ ಕೆಲಸವು ಪ್ರತಿ ವರ್ಷದ ನವೆಂಬರ್, ಡಿಸೆಂಬರ್‌ನಲ್ಲಿ ನಡೆಯುತ್ತಿತ್ತು. ಜನವರಿ ಫೆಬ್ರುವರಿಯಲ್ಲಿ ಕಣ ಅಣಿ ಮಾಡಿ, ಅಲ್ಲಿ ರಾಗಿಯ ಬಣವೆಯನ್ನು ಹರಡುವುದು ರೈತರ ವಾಡಿಕೆ ಕ್ರಮ. ಹೀಗೆ ಕಣದಲ್ಲಿ ಹರಡಿದ ರಾಗಿ ಬಣವೆಯನ್ನು ಒಪ್ಪ ಮಾಡಲು ಚಿತ್ರದಲ್ಲಿ ಕಾಣುತ್ತಿರುವ ಗುಂಡುಕಲ್ಲನ್ನು ಬಳಸಲಾಗುತ್ತಿತ್ತು. ಮೊದಲೆಲ್ಲಾ ಎತ್ತುಗಳಿಗೆ ಈ ಗುಂಡುಕಲ್ಲು ಕಟ್ಟಿ, ಸುತ್ತು ಹೊಡೆಸಲಾಗುತ್ತಿತ್ತು. ಬದುಕು ಸಲೀಸಿನತ್ತ ವಾಲುತ್ತಿದ್ದಂತೆ ಇದೇ ಗುಂಡುಕಲ್ಲನ್ನು ಟ್ರ್ಯಾಕ್ಟರ್‌ಗೆ ಅಳವಡಿಸಿ ಕಣದಲ್ಲಿ ಸುತ್ತಾಡಿಸಿ ರಾಗಿ ಒಪ್ಪ ಮಾಡಲಾಗುತ್ತಿತ್ತು. ಆದರೆ ಈ ಜಾಗಕ್ಕೆ ಬೃಹತ್ ಮಷಿನ್‌ಗಳು ಬಂದಿವೆ. ಹೀಗಾಗಿ ರಾಗಿ ಕಟಾವು ಮಾಡುವುದು, ಅದನ್ನು ಒಣಗಿಸುವುದು, ಮಂಚಿಕೆ–ಕಣ ಸಿದ್ಧಪಡಿಸುವುದು, ಎತ್ತುಗಳು, ಟ್ರ್ಯಾಕ್ಟರ್, ಗುಂಡುಕಲ್ಲಿನ ಅವಶ್ಯಕತೆ ದೂರವಾಗಿದೆ.

–ಮಲ್ಲಿಕಾರ್ಜುನ ಸುರಧೇನುಪುರ

# ತಿರುಪತಿ ನಾಮದ ಪೆಟ್ಟಿಗೆ

ಹಿಂದಿನ ಕಾಲದಲ್ಲಿ ತಿರುಪತಿಯ ನಾಮದ ವಿಧಾನದಲ್ಲಿ ನಾಮಗಳನ್ನು ಹಚ್ಚಿಕೊಳ್ಳಲು ನಾಮದ ಕಡ್ಡಿಗಳನ್ನು ಉಪಯೋಗಿಸುತ್ತಿದ್ದರಂತೆ. ಅವುಗಳನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಲು ಈ ಪುಟ್ಟ ಪೆಟ್ಟಿಗೆಯನ್ನು ಬಳಸುತ್ತಿದ್ದರು. ಕೆಲವೊಮ್ಮೆ ಅದರೊಳಗೆ ಚಿಲ್ಲರೆ ಕಾಸನ್ನು ಇಟ್ಟು ವರ್ಷಕ್ಕೊಮ್ಮೆ ತಿರುಪತಿಗೆ ಕಾಣಿಕೆಯಾಗಿಯೂ ಸಲ್ಲಿಸುತ್ತಿದ್ದರಂತೆ. ಸುಮಾರು ನೂರು ವರ್ಷಕ್ಕೂ ಹಳೆಯ ಈ ಮರದ ಪೆಟ್ಟಿಗೆಯನ್ನು ತಮ್ಮ ಪಿಜ್ಜ ಕೊರಗಜ್ಜನ ನೆನಪಿನಲ್ಲಿ ಕುಂದಾಪುರದ ಬನ್ನಾಡಿಯ ಶೇಖರ್ ಕೋಟ್ಯಾನ್ ಅವರು ತಮ್ಮ ಮೂಲಮನೆಯಲ್ಲಿ ಇರಿಸಿಕೊಂಡಿದ್ದಾರೆ. ಈಗಿನ ಕಾಲದಲ್ಲಿ ಪ್ರಾಯಶಃ ಎಲ್ಲಿಯೂ ಉಪಯೋಗಿಸದ ಮತ್ತು ತಯಾರು ಮಾಡಲಾಗದ ಇಂತಹ ವಸ್ತುವಿಗೆ ಬೆಲೆ ಕಟ್ಟಲಾಗದು ಎನ್ನುವುದು ಅವರ ಅಂಬೋಣ.

–ಆಶ್ರಿತಾ ಎಸ್. ಗಿಳಿಯಾರು





# ‘ರಾಜಲಬಂಡಾ’ದಲ್ಲಿ ಬೃಹತ್ ಮೀನು

ರಾಯಚೂರಿನ ಮಾನ್ವಿ ತಾಲ್ಲೂಕಿನಲ್ಲಿ ಇತ್ತೀಚೆಗೆ ದೊರೆತ ಈ ಬೃಹತ್ ಮೀನು ಎಲ್ಲರ ಹುಬ್ಬೇರಿಸಿದೆ. ಇಲ್ಲಿನ ರಾಜಲಬಂಡಾ ಅಣೆಕಟ್ಟೆಯಲ್ಲಿ ಮೀನುಗಾರರ ಬಲೆಗೆ ಬಿದ್ದ ಈ ಮೀನು ಇಪ್ಪತ್ತು ಕೆ.ಜಿ. ತೂಕದ್ದು. ತುಂಗಭದ್ರಾ ನದಿಯ ಜಲಾಶಯವಾದ ಇಲ್ಲಿ ಸಹಜವಾಗಿ ನಾಲ್ಕೈದು ಕೆ.ಜಿ.ಯ ಮೀನುಗಳು ದೊರೆಯುತ್ತವೆ. ಅಂಥದ್ದರಲ್ಲಿ ಭಾರಿ ಗಾತ್ರದ ಮೀನನ್ನು ನೋಡಿದ ಮೀನುಗಾರ ರಾಜ್ ಮಹಮ್ಮದ್ ಅಚ್ಚರಿಗೊಂಡಿದ್ದಾರೆ. ಮಾತ್ರವಲ್ಲದೆ ಇಪ್ಪತ್ತು ಕೆ.ಜಿ.ಯ ಮೀನನ್ನು ನೋಡಿದ ಸ್ಥಳೀಯರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

–ಈರಣ್ಣ ಬೆಂಗಾಲಿ, ರಾಯಚೂರು

